# ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್




***ಹೊರಾಂಗಣದ ಪ್ಲಾಸ್ಟರ್ ಮಾಡಿದ ಲಂಬದ (ವರ್ಟಿಕಲ್) ಗೋಡೆಗಳಿಗೆ ಬಿಳಿ ಸಿಮೆಂಟಿನಂತಹ ಒಂದು ಘಟಕ ಶಾಖವನ್ನು ಪ್ರತಿಫಲಿಸುವ ವಾಟರ್‌ಪ್ರೂಫ್ ಕೋಟಿಂಗ್***

ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್ ಎಂಬುದು ಹೊರಾಂಗಣದ ಪ್ಲಾಸ್ಟರ್ ಮಾಡಿದ ಲಂಬದ (ವರ್ಟಿಕಲ್) ಗೋಡೆಗಳಿಗೆ / ಕಾಂಕ್ರೀಟಿನ ಮೇಲ್ಮೈಗಳಿಗೆ ಸೂಕ್ತವಾದ ಪಾಲಿಮರ್ ಮಾಡಿಫೈಡ್, ಬಿಳಿ ಸಿಮೆಂಟಿನಂತಹ, ಉಚ್ಚ ಪರ್ಫಾರ್ಮೆನ್ಸ್‌ನ ಕೋಟಿಂಗ್ ಸಿಸ್ಟಮ್ ಆಗಿದೆ. ಇದನ್ನು ಜರ್ಮನ್ ಪಾಲಿಮರ್ಸ್ ಮತ್ತು ಬಿಳಿ ಸಿಮೆಂಟಿನಿಂದ ರಚಿಸಲಾಗಿದೆ. ಇದು ಗೋಡೆಗಳ ಮೂಲಕ ನೀರು ಒಳಗೆ ಸೀಪ್ ಆಗದಂತೆ ತಡೆಯುತ್ತದೆ. ಈ ರೀತಿಯಲ್ಲಿ ಇದು ಕಟ್ಟಡವನ್ನು ನೀರಿಗೆ-ಸಂಬಂಧಿಸಿದ ಡ್ಯಾಮೇಜುಗಳಿಂದ ರಕ್ಷಿಸುತ್ತದೆ ಮತ್ತು ಟಾಪ್ ಕೋಟ್ ಪೇಯಿಂಟ್‌ನ ಬಾಳಿಕೆಯನ್ನು ಕಾಪಾಡಿಕೊಂಡು ಬರುತ್ತದೆ.

## ಹಚ್ಚುವ ಏರಿಯಗಳು

- ಎಲ್ಲಾ ರೀತಿಯ ಹೊಸ ಮತ್ತು ಹಾಲಿ ಇರುವ ಹೊರಾಂಗಣದ ಕಾಂಕ್ರೀಟ್, ಆರ್‌ಸಿಸಿ ಮತ್ತು ಸಿಮೆಂಟಿನಂತಹ ಮೇಲ್ಮೈಗಳು.
- ಬಂಗಲೋಗಳ ಹೊರಗಡೆಯ ಗೋಡೆಗಳು, ಕಟ್ಟಡಗಳ ಹೊರಗಡೆಯ ಗೋಡೆಗಳು.

## ಪ್ರಾಡಕ್ಟ್‌ನ ವಿಶೇಷತೆಗಳು ಮತ್ತು ಪ್ರಯೋಜನಗಳು

- **ಹೆಚ್ಚು ಜಲನಿರೋಧಕ:** ಪಾಸಿಟಿವ್ ಹೈಡ್ರೋಸ್ಟ್ಯಾಟಿಕ್ ಪ್ರೆಶರ್‌ನ 5 ಬಾರ್‌ಗಳ ವರೆಗೆ ವಾಟರ್‌ಪ್ರೂಫಿಂಗ್ ರಕ್ಷಣೆ.
- **ಅಂಟಿಕೊಳ್ಳುವುದು:** ಆರ್‌ಸಿಸಿ, ಕಾಂಕ್ರೀಟ್ ಮತ್ತು ಸಿಮೆಂಟಿನಂತಹ ಮೇಲ್ಮೈಗಳಿಗೆ ತುಂಬಾ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.
- **ಬಾಳಿಕೆ:** ನಿಮ್ಮ ಕಟ್ಟಡದ ಮೇಲ್ಮೈಯನ್ನು ಲೀಕೇಜ್ ಮತ್ತು ಸೀಪೇಜ್‌ನ ಡ್ಯಾಮೇಜ್‌ಗಳಿಂದ ರಕ್ಷಿಸುತ್ತದೆ.
- **ಬಿರುಕುಗಳನ್ನು ಮುಚ್ಚುವುದು:** ಇದರಲ್ಲಿ ಜರ್ಮನ್ ಇಲ್ಯಾಸ್ಟೋಮೆರಿಕ್ ಪಾಲಿಮರ್‌ಗಳು ಇರುವುದರಿಂದ ಇದು ಉತ್ಕೃಷ್ಟ ರೀತಿಯಲ್ಲಿ ಬಿರುಕುಗಳನ್ನು ಮುಚ್ಚುವ ಗುಣಗಳನ್ನು ಹೊಂದಿದೆ.
- **ಬಳಸುವುದು ಮತ್ತು ಕಾಯ್ದಿರಿಸಿಕೊಂಡು ಬರುವುದು:** ಇದು ಸಿಂಗಲ್ ಪ್ಯಾಕ್, ಬಿಳಿ ಸಿಮೆಂಟ್-ಆಧಾರಿತ ಪಾಲಿಮರ್ ಮಾಡಿಫೈಡ್ ಪೌಡರ್ ಪ್ರಾಡಕ್ಟ್ ಆಗಿದೆ.
- **ಪ್ರಮಾಣೀಕೃತ ಫುಡ್ ಗ್ರೇಡ್ :** ಪ್ರಾಡಕ್ಟ್ ಅನ್ನು ಸೆಂಟ್ರಲ್ ಫುಡ್ ಟೆಕ್ನಾಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಿಂದ ಪ್ರಮಾಣೀಕರಿಸಲಾಗಿದೆ ಹಾಗೂ ನೀರಿನ ಟ್ಯಾಂಕ್‌ಗಳು, ಜಲಾಶಯಗಳು ಮುಂತಾದವುಗಳಲ್ಲಿ ಬಳಸಲು ಸುರಕ್ಷಿತವಾಗಿರುತ್ತದೆ.
- **ಬಿಳಿ ಪುಡಿ ನಿರ್ಮಾಣ ವಿರೋಧಿ:** ಇದು ಗೋಡೆಗಳ ಮೇಲೆ ಬಿಳಿ ಪುಡಿ ಉಂಟಾಗುವುದನ್ನು ತಡೆಯುತ್ತದೆ ಮತ್ತು ದೀರ್ಘಕಾಲದ ಪರಿಣಾಮವನ್ನು ನೀಡುತ್ತದೆ.
- **ಶಾಖದ ಪ್ರತಿಫಲನ ಮತ್ತು ಯುವಿ ನಿರೋಧಕ:** ಬಿಳಿ ಸಿಮೆಂಟ್ ಮತ್ತು ಬಿಳಿ ಅಡಿಟಿವ್‌ಗಳನ್ನು ಆಧರಿಸಿರುವ ಕಾರಣ, ಬಿಸಿಲಿಗೆ ತೆರೆದುಕೊಂಡ ಮೇಲ್ಮೈಗಳಿಗೆ ಹಚ್ಚಿದಾಗ, ಇದು ಹೆಚ್ಚು ಉತ್ತಮ ಮಟ್ಟದ ಯುವಿ ನಿರೋಧಕ ಪ್ರತಿಫಲನ ಹೊಂದಿರುವ ಕೋಟಿಂಗ್ ಆಗಿದೆ ಮತ್ತು 8-10°ಸೆಂ.ನಷ್ಟು ಶಾಖವನ್ನು ಕಡಿಮೆ ಮಾಡುತ್ತದೆ.
- **ಪರಿಸರ-ಸ್ನೇಹಿ:** ಇದರಲ್ಲಿ ವೊಲಟೈಲ್ ಆರ್ಗ್ಯಾನಿಕ್ ಕಾಂಪೌಂಡ್ ಇಲ್ಲ (VOC).
- **ಪಾಚಿ ಮತ್ತು ಫಂಗಸ್ ನಿರೋಧಕ**
- **ವಾರಂಟಿ:** ಈ ಪ್ರಾಡಕ್ಟ್ 8 ವರ್ಷಗಳ ವಾಟರ್‌ಪ್ರೂಫಿಂಗ್ ವಾರಂಟಿಯನ್ನು ಕೊಡುತ್ತದೆ.

## ಪ್ಯಾಕ್‌ಗಳು

- 15 ಕೇಜಿ

# ತಾಂತ್ರಿಕ ಮಾಹಿತಿ

| Properties | Seep Guard Vertical Surfaces | Test Method |
|---|---|---|
| Tensile Adhesion Strength (pull off) (n/mm²) @ 28 days | 1.59 | ASTM D7234 |
| Water Impermeability (Against Hydrostatic Pressure) (Bar) | Positive Side: Nil @ 5 bar & 2mm @7 bar<br>Negative Side: Pass @ 5 bar | EN 12390-8:2000 |
| Crack Bridging (MM) | No cracking up to 1.62 mm | EN 1062-7 |
| Alkali Resistance | No colour change | IS 15489 |
| Fungal Resistant | Zero rating | ASTM G 21 |
| Coverage* Vertical Surface: Two coats on plaster/concrete surface (Priming coat with 100% +One coat with 60-65%, Sqft/Kg) | 24-26 | In-House |
| Coverage* Vertical Surface: Three coats on RCC/concrete surface (Priming coat with 100 %+Two coat with 60-65%, Sq.ft./Kg) | 14-16 | In-House |
| Pot Life (hours) | 1.5 | In-House |
| Reduction of surface temp. at Noon time (°C) | 8-10 | In-House |
| Food Grade Certification | Pass | CFTRI Certification |

*This value is on ideal concrete surface; however, this may change according to surface pattern/ texture.



## ಶೆಲ್ಫ್ ಲೈಫ್

ತೆರೆಯದೆ ಇರುವ ಮತ್ತು ಸರಿಯಾದ ಶೇಖರಣೆಯ ಪರಿಸ್ಥಿತಿಗಳಲ್ಲಿ ಇಟ್ಟರೆ, ಉತ್ಪಾದಿಸಿದ ತಿಂಗಳಿಂದ 12 ತಿಂಗಳ ವರೆಗೆ



ಸರಿಸಾಟಿಯಿಲ್ಲದ ಬಿಳುಪು




ಮೇಲ್ಮೈ ಉಷ್ಣತೆಯನ್ನು ಕಡಿಮೆ ಮಾಡುತ್ತದೆ




ನೀರಿನ ಅತ್ಯಧಿಕ ನಿರೋಧಕ



# ಹೇಗೆ ಹಚ್ಚಬೇಕು

## ಮೇಲ್ಮೈ ಸಿದ್ಧತೆ

- ಎಮರಿ ಪೇಪರ್ (ಮರಳಿನ ಕಾಗದ), ಚಾಣ ಅಥವಾ ವೈರ್ ಬ್ರಶ್ ಇತ್ಯಾದಿಯನ್ನು ಉಪಯೋಗಿಸಿ ಮೇಲ್ಮೈಯಿಂದ ಕೊಳೆ, ಧೂಳು, ಜೈವಿಕ ದ್ರಾವಕ (ಡೀ-ಶಟರಿಂಗ್/ಕ್ಯೂರಿಂಗ್ ಫ್ರೀ ಕಾಂಪೌಂಡ್) ಮತ್ತು ಎಣ್ಣೆ ಇತ್ಯಾದಿಯಂತಹ ಸಡಿಲವಾಗಿ ಅಂಟಿಕೊಂಡ ವಸ್ತುಗಳನ್ನು ತೆಗೆಯಿರಿ.
- ಮೇಲ್ಮೈಗಳಿಗೆ ಮರು-ಪೆಯಿಂಟಿಂಗ್ ಮಾಡುವಾಗ, ಮೊದಲು ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್ ಹಚ್ಚಬೇಕಾದ ಮೇಲ್ಮೈಗಳಿಂದ ಹಳೆಯ ಪೆಯಿಂಟಿಂಗನ್ನು ತೆಗೆಯಿರಿ.
- ಬಿಳಿ ಪುಡಿ ಉಂಟಾಗಿದ್ದ ಪ್ರಸಂಗದಲ್ಲಿ, ಮೇಲ್ಮೈಯಿಂದ ಎಲ್ಲಾ ಸಡಿಲ ಕಣಗಳನ್ನೂ ತೆಗೆಯುವ ಸಲುವಾಗಿ, ಮೇಲ್ಮೈಯನ್ನು ಪೂರ್ತಿಯಾಗಿ ಸ್ವಚ್ಛ ಮಾಡಬೇಕು.
- ಮೇಲ್ಮೈಯನ್ನು ಸ್ವಚ್ಛ ನೀರಿನಿಂದ ಸರಿಯಾಗಿ ತೊಳೆಯಿರಿ ಮತ್ತು ಅದನ್ನು ಸಂಪೂರ್ಣವಾಗಿ ಒಣಗಲು ಬಿಡಿ. ಅದರ ನಂತರವೇ ಪ್ರಾಡಕ್ಟನ್ನು ಹಚ್ಚಿ.
- ಮೇಲ್ಮೈಯ (3 ಎಮ್ಎಮ್) ಮತ್ತು ದೊಡ್ಡ ಬಿರುಕುಗಳನ್ನು ಸೀಪ್ ಗಾರ್ಡ್ ಕ್ರ್ಯಾಕ್ ಎಂಡ್ ತುಂಬಿಸಬೇಕು, ಹಾಳಾದ ಭಾಗಗಳು ಮತ್ತು ಟೊಳ್ಳು ಜಾಗಗಳನ್ನು ಬಿರ್ಲಾ ವೈಟ್ ಲೆವೆಲ್‌ಪ್ಲಾಸ್ಟ್‌ನಿಂದ (ಪಾಲಿಮರ್ ಸಿಮೆಂಟ್ ಮಾಡಿಫೈಡ್ ಮಾರ್ಟರ್ ಪ್ರಾಡಕ್ಟ್) ರಿಪೇರಿ ಮಾಡಬೇಕು.

## ಪ್ರೈಮಿಂಗ್ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 100% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 1000 ಎಮ್ಎಲ್ ನೀರು) ನಿಧಾನವಾಗಿ ಸೇರಿಸಿ.
- ಅತ್ಯುತ್ತಮ ಪರ್ಫಾರ್ಮೆನ್ಸ್ ಪಡೆಯುವುದಕ್ಕೆ ಚೆನ್ನಾಗಿ ಮಿಶ್ರಗೊಳಿಸಿದ ನಂತರ ರಾಡಿಯನ್ನು 5 ನಿಮಿಷ ಹಾಗೆಯೇ ಇರಲು ಬಿಡಿ. ತಯಾರಿಸಿದ ರಾಡಿಯನ್ನು 11.5 ಗಂಟೆಯೊಳಗೆ ಬಳಸಬೇಕು.
- ಒಳ್ಳೆಯ ಮಿಶ್ರಣ ತಯಾರಿಸಿದ ನಂತರ ಪೆಯಿಂಟಿಂಗ್ ಬ್ರಶ್/ರೋಲರ್‌ನ ಸಹಾಯದಿಂದ ಸ್ವಚ್ಛ ಹಾಗೂ ಒಣಗಿದ ಗೋಡೆಯ /ಅಡಿ-ಪದರದ ಮೇಲ್ಮೈ ಮೇಲೆ ಏಕಪ್ರಕಾರವಾಗಿ ಪ್ರೈಮಿಂಗ್ ಕೋಟ್ ಮಾಡಿ.

## 1ನೇ ಮತ್ತು 2ನೇ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 60%-65% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 600-650 ಎಮ್ಎಲ್ ನೀರು) ನಿಧಾನವಾಗಿ ಸೇರಿಸಿ.
- ಸಾಧ್ಯವಾದರೆ ಮಿಶ್ರಣವನ್ನು ಕದಡುವ ಯಂತ್ರದಿಂದ (mechanical stirrer) (3-5 ನಿಮಿಷಗಳು) ತಯಾರಿಸಬೇಕು.
- ಹೆಚ್ಚು ಉತ್ತಮವಾಗಿ ಅಂಟಿಕೊಳ್ಳುವುದಕ್ಕೆ ಮತ್ತು ಹೆಚ್ಚು ಕವರೇಜ್‌ಗೆ, ಒಳ್ಳೆಯ ಮಿಶ್ರಣ ತಯಾರಿಸಿದ ನಂತರ 4-6 ಗಂಟೆಗಳ ಮಧ್ಯಾಂತರದಲ್ಲಿ ಅಡ್ಡ ದಿಕ್ಕಿನಿಂದ ಪ್ರಾಡಕ್ಟ್‌ನ ಎರಡು ಕೋಟಿಂಗ್ ಮಾಡಿ.
- ಇತರ ಟಾಪ್ ಕೋಟ್ ಪ್ರಾಡಕ್ಟ್‌ಗಳನ್ನು ಹಚ್ಚುವ ಮೊದಲು ಈ ಮೇಲ್ಮೈಯನ್ನು ಸಂಪೂರ್ಣವಾಗಿ ಒಣಗಲು ಬಿಡಿ, ಸಾಧ್ಯವಾದರೆ 10-12 ಗಂಟೆಗಳ ಕಾಲ ಒಣಗಲು ಬಿಡಿ.
- ಎರಡೂ ಕೋಟಿಂಗ್‌ಗಳ ಒಟ್ಟು ದಪ್ಪ ಹೆಚ್ಚೆಂದರೆ 1 ಎಮ್ಎಮ್‌ಗೆ ಸೀಮಿತವಾಗಿರಬೇಕು.

## ಹೊರಾಂಗಣದ ಪ್ರೈಮರ್ ಮತ್ತು ಹೊರಾಂಗಣದ ಎಮಲ್ಷನ್ ಹಚ್ಚುವುದು

- ಬ್ರಶ್/ರೋಲರ್ ಬಳಸಿ ಬಿರ್ಲಾ ವೈಟ್ ಆಕ್ಟಿವ್ ಕೋಟ್ ಹೊರಾಂಗಣದ ಪ್ರೈಮರ್‌ನ ಸಿಂಗಲ್ ಕೋಟಿಂಗ್ ಮಾಡಿ 3-4 ಗಂಟೆಗಳ ಕಾಲ ಒಣಗಲು ಬಿಡಿ.
- ಪ್ರೈಮರ್ ಹಚ್ಚಿದ ನಂತರ, ಎಕ್ಸ್‌ಟೀರಿಯರ್ ಎಮಲ್ಷನ್ ಟಾಪ್ ಕೋಟ್ ಪೆಯಿಂಟ್ ಹಚ್ಚಿ, ಅದು ವಾಟರ್‌ಪ್ರೂಫಿಂಗ್ ರಕ್ಷಣೆ ಕೊಡುತ್ತದೆ.

# SEEPGUARD™

## WATERPROOFING SOLUTIONS

## VERTICAL SURFACES

Waterproofing 8 year* Warranty

